### ಎಂ.ಕೆ. ಸೋಮಶೇಖರ್ — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಕೃಷ್ಣರಾಜ



7.57/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.57 |
| ಕುಡಿಯುವ ನೀರು | 9.76 |
| ವಿದ್ಯುತ್ | 9.33 |
| ರಸ್ತೆ | 9.33 |
| ಶಾಸಕರು ಕೈಗೆ ಸಿಗುತ್ತಾರಾ? | 8.79 |

### ವಾಸು — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಚಾಮರಾಜ



7.44/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.33 |
| ಕುಡಿಯುವ ನೀರು | 9.33 |
| ವಿದ್ಯುತ್ | 9.00 |
| ರಸ್ತೆ | 9.13 |
| ಶಾಸಕರು ಕೈಗೆ ಸಿಗುತ್ತಾರಾ? | 8.87 |

### ಸಾ.ರಾ. ಮಹೇಶ್ — ಜೆಡಿಎಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಕೃಷ್ಣರಾಜನಗರ



6.54/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.58 |
| ಕುಡಿಯುವ ನೀರು | 8.30 |
| ವಿದ್ಯುತ್ | 5.67 |
| ರಸ್ತೆ | 7.52 |
| ಶಾಸಕರು ಕೈಗೆ ಸಿಗುತ್ತಾರಾ? | 8.23 |

### ಎಚ್.ಪಿ. ಮಂಜುನಾಥ್ — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಹುಣಸೂರು



6.18/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.68 |
| ಕುಡಿಯುವ ನೀರು | 9.37 |
| ವಿದ್ಯುತ್ | 8.10 |
| ರಸ್ತೆ | 6.19 |
| ಶಾಸಕರು ಕೈಗೆ ಸಿಗುತ್ತಾರಾ? | 7.94 |

### ಚಿಕ್ಕಮಾದು (ದಿವಂಗತ) — ಜೆಡಿಎಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಹೆಗ್ಗಡದೇವನಕೋಟೆ



6.15/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 7.44 |
| ಕುಡಿಯುವ ನೀರು | 8.10 |
| ವಿದ್ಯುತ್ | 7.67 |
| ರಸ್ತೆ | 8.14 |
| ಶಾಸಕರು ಕೈಗೆ ಸಿಗುತ್ತಾರಾ? | 7.83 |

### ಕೆ. ವೆಂಕಟೇಶ್ — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ಪಿರಿಯಾಪಟ್ಟಣ



6.08/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.05 |
| ಕುಡಿಯುವ ನೀರು | 9.17 |
| ವಿದ್ಯುತ್ | 8.04 |
| ರಸ್ತೆ | 7.80 |
| ಶಾಸಕರು ಕೈಗೆ ಸಿಗುತ್ತಾರಾ? | 7.80 |

### ಕಳಲೆ ಎನ್. ಕೇಶವಮೂರ್ತಿ — ಕಾಂಗ್ರೆಸ್
ಜಿಲ್ಲೆ: ಮೈಸೂರು
ಕ್ಷೇತ್ರ: ನಂಜನಗೂಡು



5.96/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.66 |
| ಕುಡಿಯುವ ನೀರು | 6.55 |
| ವಿದ್ಯುತ್ | 6.32 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ಎನ್. ಚಲುವರಾಯಸ್ವಾಮಿ — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ನಾಗಮಂಗಲ



6.75/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.72 |
| ಕುಡಿಯುವ ನೀರು | 6.72 |
| ವಿದ್ಯುತ್ | 6.78 |
| ರಸ್ತೆ | 6.72 |
| ಶಾಸಕರು ಕೈಗೆ ಸಿಗುತ್ತಾರಾ? | 6.78 |

### ಕೆ.ಎಸ್. ಪುಟ್ಟಣ್ಣಯ್ಯ (ದಿವಂಗತ) — ಸರ್ವೋದಯ ಕರ್ನಾಟಕ
ಜಿಲ್ಲೆ: ಮಂಡ್ಯ
ಕ್ಷೇತ್ರ: ಮೇಲುಕೋಟೆ



6.69/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.67 |
| ಕುಡಿಯುವ ನೀರು | 6.67 |
| ವಿದ್ಯುತ್ | 6.67 |
| ರಸ್ತೆ | 6.67 |
| ಶಾಸಕರು ಕೈಗೆ ಸಿಗುತ್ತಾರಾ? | 6.67 |

### ನಾರಾಯಣಗೌಡ — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಕೃಷ್ಣರಾಜಪೇಟೆ



8.35/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.50 |
| ಕುಡಿಯುವ ನೀರು | 8.17 |
| ವಿದ್ಯುತ್ | 8.14 |
| ರಸ್ತೆ | 8.44 |
| ಶಾಸಕರು ಕೈಗೆ ಸಿಗುತ್ತಾರಾ? | 7.72 |

### ರಮೇಶ ಬಂಡಿಸಿದ್ದೇಗೌಡ — ಜೆಡಿಎಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಶ್ರೀರಂಗಪಟ್ಟಣ



8.25/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.61 |
| ಕುಡಿಯುವ ನೀರು | 8.33 |
| ವಿದ್ಯುತ್ | 8.00 |
| ರಸ್ತೆ | 8.17 |
| ಶಾಸಕರು ಕೈಗೆ ಸಿಗುತ್ತಾರಾ? | 7.61 |

### ಪಿ.ಎಂ. ನರೇಂದ್ರಸ್ವಾಮಿ — ಕಾಂಗ್ರೆಸ್
ಜಿಲ್ಲೆ: ಮಂಡ್ಯ
ಕ್ಷೇತ್ರ: ಮಳವಳ್ಳಿ



8.11/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.39 |
| ಕುಡಿಯುವ ನೀರು | 8.39 |
| ವಿದ್ಯುತ್ | 8.06 |
| ರಸ್ತೆ | 8.28 |
| ಶಾಸಕರು ಕೈಗೆ ಸಿಗುತ್ತಾರಾ? | 7.11 |

### ಅಂಕ 'ಗಣಿತ'

'ದಕ್ಷ' ಹಾಗೂ ಪ್ರಜಾವಾಣಿ ನಡೆಸಿದ ಸಮೀಕ್ಷೆ ವೇಳೆ ಮತದಾರರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಸೀಮಿತವಾಗಿ ಕೆಲವು ನಿರ್ದಿಷ್ಟ ಪ್ರಶ್ನೆಗಳೂ ಇದ್ದವು.

ಈ ಎಲ್ಲ ವಿಷಯಗಳಲ್ಲಿ ಶಾಸಕರು ಪಡೆದಿರುವ ಅಂಕಗಳನ್ನು ಕ್ರೋಡೀಕರಿಸಿ, ಒಟ್ಟು 10 ಅಂಕಗಳಲ್ಲಿ ಅವರು ಗಳಿಸಿರುವ ಅಂಕಗಳನ್ನು ನೀಡಲಾಗಿದೆ. ಜನರು ಅತಿ ಮುಖ್ಯ ಪರಿಗಣಿಸಿರುವ ಐದು ಕ್ಷೇತ್ರಗಳಲ್ಲಿ ಶಾಸಕರು ಪಡೆದ ಅಂಕಗಳನ್ನು ಮಾತ್ರ ಪ್ರತ್ಯೇಕವಾಗಿ ನೀಡಲಾಗಿದೆ.

### ಸಿ. ಪುಟ್ಟರಂಗಶೆಟ್ಟಿ — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಚಾಮರಾಜನಗರ



6.85/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 8.00 |
| ಕುಡಿಯುವ ನೀರು | 8.22 |
| ವಿದ್ಯುತ್ | 8.22 |
| ರಸ್ತೆ | 7.56 |
| ಶಾಸಕರು ಕೈಗೆ ಸಿಗುತ್ತಾರಾ? | 9.11 |

### ಆರ್. ನರೇಂದ್ರ — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಹನೂರು



5.98/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 6.81 |
| ಕುಡಿಯುವ ನೀರು | 6.39 |
| ವಿದ್ಯುತ್ | 6.81 |
| ರಸ್ತೆ | 7.64 |
| ಶಾಸಕರು ಕೈಗೆ ಸಿಗುತ್ತಾರಾ? | 5.97 |

### ಎಸ್. ಜಯಣ್ಣ — ಕಾಂಗ್ರೆಸ್
ಜಿಲ್ಲೆ: ಚಾಮರಾಜನಗರ
ಕ್ಷೇತ್ರ: ಕೊಳ್ಳೇಗಾಲ



8.74/10

| ಯಾವುದರಲ್ಲಿ ಎಷ್ಟು ಅಂಕ? | |
|---|---|
| ಉತ್ತಮ ಶಾಲೆಗಳು | 9.49 |
| ಕುಡಿಯುವ ನೀರು | 6.39 |
| ವಿದ್ಯುತ್ | 9.76 |
| ರಸ್ತೆ | 10 |
| ಶಾಸಕರು ಕೈಗೆ ಸಿಗುತ್ತಾರಾ? | 8.89 |

# 50 ಹೊಸ ಮುಖಗಳಿಗೆ ಬಿಜೆಪಿ ಟಿಕೆಟ್

## ಕಳಂಕಿತರು, ಜನರ ವಿಶ್ವಾಸ ಕಳೆದುಕೊಂಡವರಿಗೆ ಬಿ ಫಾರಂ ಇಲ್ಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸಭೆಯ 50 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಟಿಕೆಟ್ ನೀಡಿ, ಗೆಲ್ಲಿಸಿಕೊಂಡು ಬರಲು ಬಿಜೆಪಿ ವರಿಷ್ಠರು ಚಿಂತನೆ ನಡೆಸಿದ್ದಾರೆ.

ಹೊರಗಿನಿಂದ ಬಂದು ಪಕ್ಷ ಸೇರಿಕೊಂಡವರು ಸೇರಿದಂತೆ 46 ಕ್ಷೇತ್ರಗಳಲ್ಲಿ ಹಾಲಿ ಶಾಸಕರು ಹಾಗೂ ಪಕ್ಷೇತರರಾಗಿ ಆಯ್ಕೆಯಾಗಿ, ಇತ್ತೀಚೆಗೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಒಬ್ಬರು ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಇವರಲ್ಲದೆ, 2008ರಲ್ಲಿ ಗೆದ್ದು 2013ರ ಚುನಾವಣೆಯಲ್ಲಿ ಸೋತಿದ್ದ 57ಕ್ಕೂ ಹೆಚ್ಚು ಮಾಜಿ ಶಾಸಕರು ಕಣಕ್ಕೆ ಇಳಿಯುವ ತಯಾರಿ ನಡೆಸಿದ್ದಾರೆ.

ಹಾಲಿ ಶಾಸಕರೂ ಸೇರಿದಂತೆ ಎಲ್ಲ ಆಕಾಂಕ್ಷಿಗಳ ಪೈಕಿ ಭ್ರಷ್ಟಾಚಾರದ ಕಳಂಕ ಹೊತ್ತವರು ಹಾಗೂ ಜನರ ವಿಶ್ವಾಸವನ್ನು ಕಳೆದುಕೊಂಡವರಿಗೆ 2018ರ ವಿಧಾನಸಭೆ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪುವ ಸಾಧ್ಯತೆ ಹೆಚ್ಚಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕಳಂಕಿತರಿಗೆ ಟಿಕೆಟ್ ನೀಡಿದರೆ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಲಿದೆ. ಜನರ ವಿಶ್ವಾಸ ಕಳೆದುಕೊಂಡವರಿಗೆ ಟಿಕೆಟ್ ಕೊಟ್ಟರೆ ಗೆಲ್ಲುವುದು ಕಷ್ಟ. ಟಿಕೆಟ್ ನೀಡುವ ಮುನ್ನ ಈ ಎರಡು ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಎಷ್ಟೇ ಪ್ರಭಾವಿ ಆಗಿದ್ದು, ಎರಡು ಅಥವಾ ಮೂರು ಬಾರಿ ಗೆದ್ದಿರುವುದು ಟಿಕೆಟ್ ಪಡೆಯಲು ಅರ್ಹತೆಯಾಗುವುದಿಲ್ಲ. ಗೆಲ್ಲಲು ಸಾಧ್ಯವೇ ಇಲ್ಲದಷ್ಟು ಆಡಳಿತ ವಿರೋಧಿ ಅಲೆ ಹೊಂದಿರುವ ಹಾಲಿ ಶಾಸಕರಲ್ಲಿ 10ಕ್ಕಿಂತ ಹೆಚ್ಚಿನವರನ್ನು ಗುರುತಿಸಲಾಗಿದೆ. ಇಂತಹ ಕ್ಷೇತ್ರಗಳಲ್ಲಿ, ಸಂಘ ಪರಿವಾರದಲ್ಲಿ ದಶಕಗಳ ಕಾಲ ನಿಷ್ಠಾವಂತರಾಗಿ ಕೆಲಸ ಮಾಡಿದ, ಕ್ಷೇತ್ರ ಮಟ್ಟದಲ್ಲಿ ತಮ್ಮದೇ ಪ್ರಭಾವ ಬೆಳೆಸಿಕೊಂಡವರಿಗೆ ಟಿಕೆಟ್ ನೀಡುವ ಆಲೋಚನೆ ವರಿಷ್ಠರದ್ದಾಗಿದೆ ಎಂದು ಮೂಲಗಳು ಹೇಳಿವೆ.

ಹೀಗೆ ಮಾಡುವುದರಿಂದ ನಿಷ್ಠಾವಂತರಿಗೆ ಹಾಗೂ ಪರಿಶುದ್ಧರಿಗೆ ಟಿಕೆಟ್ ಕೊಟ್ಟಂತಾಗುತ್ತದೆ. ಅದರ ಜತೆಗೆ, ಆರ್‌ಎಸ್‌ಎಸ್ ಕಾರ್ಯಕರ್ತರು ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಪ್ರೇರಣೆ ನೀಡಿದಂತಾಗುತ್ತದೆ. ಪಕ್ಷ ಅಧಿಕಾರಕ್ಕೆ ಬಂದ ಬಳಿಕವೂ ಕಳಂಕ ರಹಿತ, ಪಾರದರ್ಶಕ ಆಡಳಿತ ನೀಡಲು ಇದು ನೆರವಾಗಬಹುದು ಎಂಬ ಲೆಕ್ಕಾಚಾರ ಕೂಡ ಇದರ ಹಿಂದಿದೆ.

2008ರಿಂದ 2013ರ ಅವಧಿಯಲ್ಲಿ ಬಿಜೆಪಿ ಆಡಳಿತದಲ್ಲಿದ್ದಾಗ ಅನೇಕ ಸಚಿವರು, ಶಾಸಕರು ಭ್ರಷ್ಟಾಚಾರ ಹಾಗೂ ಲೈಂಗಿಕ ಹಗರಣದ ಆರೋಪಕ್ಕೆ ಗುರಿಯಾಗಿ, ಜೈಲಿಗೂ ಹೋಗಿದ್ದರು. ಈ ಕಾರಣದಿಂದಾಗಿ 2013ರಲ್ಲಿ ನಡೆದ ಚುನಾವಣೆಯಲ್ಲಿಯೇ ಕೆಲವರಿಗೆ ಪಕ್ಷದಿಂದ ಟಿಕೆಟ್ ನಿರಾಕರಿಸಲಾಗಿತ್ತು. ಕೆಲವರು ಬಿಜೆಪಿ ತೊರೆದು ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್‌ನಿಂದ ಕಣಕ್ಕೆ ಇಳಿದಿದ್ದರು. ಈ ಪೈಕಿ ಕೆಲವರು ಗೆದ್ದಿದ್ದರು.

ಕಳಂಕದ ಆರೋಪಕ್ಕೆ ಗುರಿಯಾಗಿದ್ದ ಕೆಲವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಸಿದ್ಧತೆಯನ್ನೂ ನಡೆಸಿದ್ದಾರೆ. ಮಾಜಿ ಶಾಸಕರಾದ ಕಟ್ಟಾ ಸುಬ್ರಹ್ಮಣ್ಯ-ನಾಯ್ಡು, ಮಾಲೂರು ಕೃಷ್ಣಯ್ಯ ಶೆಟ್ಟಿ, ಹರತಾಳು ಹಾಲಪ್ಪ, ರಘುಪತಿ ಭಟ್ ಗುರುತರ ಆರೋಪಕ್ಕೆ ಗುರಿಯಾಗಿದ್ದರು. ಇವರೆಲ್ಲರೂ ಟಿಕೆಟ್ ಸಿಗುವ ನಿರೀಕ್ಷೆಯಲ್ಲಿದ್ದಾರೆ. ಇನ್ನೂ 15ಕ್ಕೂ ಹೆಚ್ಚು ಹಾಲಿ ಶಾಸಕರ ವಿರುದ್ಧ ಆಗ ಲೋಕಾಯುಕ್ತ ತನಿಖೆ ನಡೆದಿತ್ತು. ಹೀಗೆ ಕಳಂಕ ಹೊತ್ತವರು ಈಗ ಆರೋಪದಿಂದ ಮುಕ್ತರಾಗಿದ್ದರೆ ಮತ್ತು ಕ್ಷೇತ್ರದ ಜನರ ವಿಶ್ವಾಸ ಗಳಿಸಿಕೊಂಡು, ಗೆಲ್ಲುವ ಸಾಧ್ಯತೆ ಇದ್ದರೆ ಮಾತ್ರ ಟಿಕೆಟ್ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ.

### ಟಿಕೆಟ್ ಆಕಾಂಕ್ಷಿಗಳು ...

ಸದ್ಯ ಮುಕ್ತಾಯದ ಅಂಚಿನಲ್ಲಿರುವ 14ನೇ ವಿಧಾನಸಭೆಯ ಅವಧಿಯಲ್ಲಿ 42 ವಿಧಾನಸಭಾ ಕ್ಷೇತ್ರಗಳಲ್ಲಿ ಸದ್ಯ ಬಿಜೆಪಿ ಪ್ರಾತಿನಿಧ್ಯವಿದೆ. ಕೆಜೆಪಿಯಿಂದ ಗೆದ್ದಿದ್ದ ಗುರು ಪಾಟೀಲ ಶಿರವಾಳ, ಬಿಎಸ್‌ಆರ್ ಕಾಂಗ್ರೆಸ್‌ನ ಪಿ. ರಾಜೀವ್, ಸುರೇಶಬಾಬು, ಕಾಂಗ್ರೆಸ್ ಸಹ ಸದಸ್ಯರಾಗಿದ್ದ ಸಿ.ಪಿ. ಯೋಗೇಶ್ವರ್ ಹಾಗೂ ಪಕ್ಷೇತರರಾಗಿ ಗೆದ್ದು, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಹಾಲಾಡಿ ಶ್ರೀನಿವಾಸ ಶೆಟ್ಟಿ ಇತ್ತೀಚೆಗೆ ಬಿಜೆಪಿ ಸೇರಿದ್ದಾರೆ. ಇವರೆಲ್ಲರೂ ಟಿಕೆಟ್ ಸಿಗುವ ನಿರೀಕ್ಷೆಯಲ್ಲಿದ್ದಾರೆ.

ಮೊಳಕಾಲ್ಮುರು ಕ್ಷೇತ್ರದ ಬಿಎಸ್‌ಆರ್ ಕಾಂಗ್ರೆಸ್ ಸದಸ್ಯ ತಿಪ್ಪೇಸ್ವಾಮಿ ಮಾತ್ರ ಸದ್ಯ ಎಲ್ಲಿಯೂ ಗುರುತಿಸಿಕೊಂಡಿಲ್ಲ.

### ಇಬ್ಬರು ಸಂಸದರಿಗೆ ಮಾತ್ರ ಟಿಕೆಟ್?

ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ, ಶಿವಮೊಗ್ಗ ಸಂಸದ ಬಿ.ಎಸ್. ಯಡಿಯೂರಪ್ಪ ಮತ್ತು ಬಳ್ಳಾರಿ ಸಂಸದ ಶ್ರೀರಾಮುಲುಗೆ ಮಾತ್ರ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗುವ ಸಾಧ್ಯತೆ ಇದೆ.

ಯಾವ ಸಂಸದರಿಗೂ ಟಿಕೆಟ್ ನೀಡದೇ ಇರಲು ಪಕ್ಷ ಮೊದಲು ನಿರ್ಧರಿಸಿತ್ತು. ಆದರೆ, ಮುಖ್ಯಮಂತ್ರಿ ಅಭ್ಯರ್ಥಿಗೆ ಟಿಕೆಟ್ ನೀಡದೇ ಇದ್ದರೆ, ಪಕ್ಷ ಅಧಿಕಾರಕ್ಕೆ ಬಂದಲ್ಲಿ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡುವುದಿಲ್ಲ ಎಂಬ ಅಪಪ್ರಚಾರವನ್ನು ಎದುರಿಸಬೇಕಾಗುತ್ತದೆ. ಹೀಗಾದಲ್ಲಿ ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಯಡಿಯೂರಪ್ಪಗೆ ಟಿಕೆಟ್ ನೀಡಲು ಪಕ್ಷದ ವರಿಷ್ಠರು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅವರನ್ನು ಬಿಟ್ಟು ಯಾವುದೇ ಸಂಸದರಿಗೂ ಟಿಕೆಟ್ ಇಲ್ಲ ಎಂಬ ನಿಶ್ಚಯಕ್ಕೆ ಬರಲಾಗಿತ್ತು. ಬಳ್ಳಾರಿ ಜಿಲ್ಲೆಯ ಆನಂದ್ ಸಿಂಗ್ ಹಾಗೂ ನಾಗೇಂದ್ರ ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದಾರೆ. ಒಂದು ವೇಳೆ ರಾಮುಲು ಅವರನ್ನು ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕೆ ಇಳಿಸದೇ ಇದ್ದರೆ ಆ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲುವುದು ಕಷ್ಟವಾಗಬಹುದು. ವಾಲ್ಮೀಕಿ ಸಮುದಾಯಕ್ಕೆ ಸೇರಿರುವ ಶ್ರೀರಾಮುಲು ಸ್ಪರ್ಧಿಸಿದರೆ ಬಳ್ಳಾರಿ ಮಾತ್ರವಲ್ಲದೆ, ಈ ಸಮುದಾಯ ಪ್ರಬಲವಾಗಿರುವ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿಗೆ ಅನುಕೂಲವಾಗಬಹುದು ಎಂಬ ತರ್ಕವೂ ಇದರ ಹಿಂದೆ ಇದೆ ಎಂದೂ ಮೂಲಗಳು ಹೇಳಿವೆ.

ಕೆಪಿಸಿಸಿ ಚುನಾವಣಾ ಸಮಿತಿ ಸಭೆ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧ

# ಸೋತ 90 ಕ್ಷೇತ್ರಗಳಿಗೆ ಟಿಕೆಟ್ ಹಂಚಿಕೆ ಚರ್ಚೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ವಿಧಾನಸಭೆಗೆ 2013ರಲ್ಲಿ ನಡೆದ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಸೋಲು ಕಂಡ 90 ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುವ ಕುರಿತು ಕೆಪಿಸಿಸಿ ಚುನಾವಣಾ ಸಮಿತಿ ಬುಧವಾರ ಚರ್ಚೆ ನಡೆಸಿದೆ.

ಗೆಲುವೊಂದೇ ಮುಖ್ಯ ಮಾನದಂಡ ಮಾಡಿಕೊಂಡು ಟಿಕೆಟ್ ಆಕಾಂಕ್ಷಿಗಳ ಸಾಮರ್ಥ್ಯ ಮೌಲ್ಯಮಾಪನ ನಡೆಸಿದ ಸಮಿತಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದೆ.

ಸಭೆಯ ಬಳಿಕ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, 'ಕಳೆದ ಚುನಾವಣೆಯಲ್ಲಿ ಪರಾಭವಗೊಂಡ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಕುರಿತು ಚರ್ಚಿಸಿದ್ದೇವೆ' ಎಂದರು.

'ಹಾಲಿ ಶಾಸಕರು, ಪಕ್ಷೇತರರು ಗೆದ್ದಿರುವ ಕ್ಷೇತ್ರಗಳ ಟಿಕೆಟ್ ಹಂಚಿಕೆ ಕುರಿತು ಚರ್ಚಿಸಲು ಇದೇ 26ರಂದು ಮತ್ತೆ ಸಭೆ ಸೇರುತ್ತೇವೆ. ಟಿಕೆಟ್ ನೀಡುವಾಗ ಸಾಮಾಜಿಕ ನ್ಯಾಯವನ್ನೂ ಪರಿಗಣಿಸುತ್ತೇವೆ. ಕಳಂಕಿತರು, ಆರೋಪಿಗಳು ಆಕಾಂಕ್ಷಿಗಳಾಗಿದ್ದರೆ ಅಂಥವರ ಬಗ್ಗೆ ಚುನಾವಣಾ ಪರಿಶೀಲನಾ ಸಮಿತಿ ತೀರ್ಮಾನಿಸಲಿದೆ' ಎಂದರು.

'ಪಕ್ಷದಲ್ಲಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ಅಧಿಕವಾಗಿದೆ. ಉತ್ತಮ ವ್ಯಕ್ತಿತ್ವ ಹೊಂದಿರುವ, ಗೆಲ್ಲುವ ಅಭ್ಯರ್ಥಿಗಳ ಬಗ್ಗೆ ಹೈಕಮಾಂಡ್ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಈ ತಿಂಗಳ ಅಂತ್ಯದೊಳಗೆ ಕನಿಷ್ಠ 100 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲು ಹೈಕಮಾಂಡ್ ಉದ್ದೇಶಿಸಿದೆ.

ಸಭೆಯ ಆರಂಭದಲ್ಲಿ ಸಮಿತಿ ಸದಸ್ಯರನ್ನು ಐದು ವಿಭಾಗಗಳಾಗಿ ವಿಂಗಡಿಸಲಾಯಿತು. ಪ್ರತಿ ವಿಭಾಗದಲ್ಲಿ ತಲಾ ಕನಿಷ್ಠ ಎಂಟು ಸದಸ್ಯರನ್ನು ನೇಮಿಸಿ, ಆಯಾ ವಿಭಾಗದಲ್ಲಿ ಬರುವ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಅರ್ಜಿಗಳನ್ನು ಪರಿಶೀಲಿಸಲಾಯಿತು. ಐದು ಮಾನದಂಡಗಳನ್ನು ಪರಿಗಣಿಸಿ ಪ್ರತಿ ಕ್ಷೇತ್ರಕ್ಕೆ 2–3 ಸಂಭಾವ್ಯ ಹೆಸರುಗಳನ್ನು ಪಟ್ಟಿ ಮಾಡಲಾಗಿದೆ.

ಇದೇ 28ರಂದು ದೆಹಲಿಯಲ್ಲಿ ನಡೆಯಲಿರುವ ಚುನಾವಣಾ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ಪಟ್ಟಿ ಬಗ್ಗೆ ಚರ್ಚೆಯಾಗಲಿದೆ. ಬಳಿಕ ವರಿಷ್ಠರು ಹೆಸರು ಅಂತಿಮಗೊಳಿಸಲಿದ್ದಾರೆ ಎಂದು ಕೆಪಿಸಿಸಿ ಮೂಲಗಳು ತಿಳಿಸಿವೆ.



ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್, ಜಿ. ಪರಮೇಶ್ವರ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಚಿತ್ರದಲ್ಲಿ ಇದ್ದಾರೆ

### ವಿಭಾಗವಾರು ಚುನಾವಣಾ ಸಮಿತಿ

**ಬೆಂಗಳೂರು :** ಡಿ.ಕೆ. ಶಿವಕುಮಾರ್, ವೀರಪ್ಪ ಮೊಯಿಲಿ, ಕೆ.ಜೆ. ಜಾರ್ಜ್, ರಾಮಲಿಂಗಾ ರೆಡ್ಡಿ, ಎಂ. ಕೃಷ್ಣಪ್ಪ, ಸಿ.ಎಂ. ಇಬ್ರಾಹಿಂ, ಕೃಷ್ಣ ಬೈರೇಗೌಡ, ಎಸ್.ಎಸ್. ಮಲ್ಲಿಕಾರ್ಜುನ್, ರೋಷನ್ ಬೇಗ್, ಎಚ್.ಎಸ್. ಮಂಜುನಾಥ, ಕೆ.ಪಿ. ಕೃಷ್ಣ ಮೂರ್ತಿ, ಡಿ.ಕೆ. ಸುರೇಶ್, ಎಸ್.ಪಿ. ಮುದ್ದು ಹನುಮೇಗೌಡ, ಬಿ.ಎನ್. ಚಂದ್ರಪ್ಪ, ಪ್ರೊ. ರಾಜೀವ್ ಗೌಡ, ಕೆ.ಸಿ. ರಾಮಮೂರ್ತಿ

**ಮೈಸೂರು:** ದಿನೇಶ್ ಗುಂಡೂರಾವ್, ಕೆ.ಎಚ್. ಮುನಿಯಪ್ಪ, ರೆಹಮಾನ್ ಖಾನ್, ಬಿ. ರಮಾನಾಥ ರೈ, ಎಚ್.ಸಿ. ಮಹದೇವಪ್ಪ, ಬಿ.ಎಲ್. ಶಂಕರ್, ಮೋಟಮ್ಮ, ರಾಣಿ ಸತೀಶ್, ವಿಜಯಕುಮಾರ್ ಸೊರಕೆ, ಎಂ.ಎಚ್. ಅಂಬರೀಷ್, ಆರ್. ಧ್ರುವನಾರಾಯಣ್

**ಬೆಳಗಾವಿ:** ಎಸ್.ಆರ್. ಪಾಟೀಲ, ಮಾರ್ಗರೆಟ್ ಆಳ್ವ, ಆರ್.ವಿ. ದೇಶಪಾಂಡೆ, ಎಚ್. ಕೆ. ಪಾಟೀಲ, ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ, ಸಿ.ಎಸ್. ನಾಡಗೌಡ, ಸಲೀಂ ಅಹಮದ್, ಉಮಾಶ್ರೀ, ಲಕ್ಷ್ಮೀ ಹೆಬ್ಬಾಳ್ಕರ, ಪ್ರಕಾಶ ಹುಕ್ಕೇರಿ

**ಕಲಬುರ್ಗಿ:** ಬಿ.ಕೆ. ಹರಿಪ್ರಸಾದ್, ಅಲ್ಲಂ ವೀರಭದ್ರಪ್ಪ, ಸಂತೋಷ್ ಲಾಡ್, ಪಿ.ಟಿ. ಪರಮೇಶ್ವರ್ ನಾಯ್ಕ್, ಶಿವರಾಜ್ ತಂಗಡಗಿ, ಬಸವನಗೌಡ ಬಾದರ್ಲಿ, ವಿ.ವಿ. ನಾಯಕ್


### ಮಾನದಂಡ

- ಭ್ರಷ್ಟರಿಗೆ ಟಿಕೆಟ್ ನಿರಾಕರಣೆ
- ಗೆಲ್ಲುವ ಅಭ್ಯರ್ಥಿಗೆ ಮಣೆ (ವಯಸ್ಸಿನ ಮಿತಿ ಇಲ್ಲ)
- ಒಂದು ಕುಟುಂಬಕ್ಕೆ ಒಂದು ಟಿಕೆಟ್ ನಿಯಮ ಸಡಿಲಿಕೆ
- 2013ರಲ್ಲಿ 25,000 ಮತಗಳ ಅಂತರದಲ್ಲಿ ಸೋತವರು, ಗೆಲ್ಲುವ ಬಗ್ಗೆ ಸಮೀಕ್ಷೆ ಮಾಹಿತಿ ನೀಡಿದ್ದರೆ ಅಂಥವರಿಗೆ ಅವಕಾಶ
- ಅಭ್ಯರ್ಥಿ ಅಂತಿಮ: ಹೈಕಮಾಂಡ್ ತೀರ್ಮಾನಕ್ಕೆ

### 'ಜನರಿಗೆ ಸುಸ್ತಾಗಿದೆ'

'ಉತ್ತರ ಪ್ರದೇಶ, ಬಿಹಾರ ರಾಜ್ಯಗಳಲ್ಲಿ ಲೋಕಸಭೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿಗೆ ಮುಖಭಂಗವಾಗಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಅಮಿತ್ ಶಾ ಮಾತು ಕೇಳಿ ಜನ ಸುಸ್ತಾಗಿದ್ದಾರೆ' ಎಂದು ದಿನೇಶ್ ಗುಂಡೂರಾವ್ ವ್ಯಂಗ್ಯವಾಡಿದರು.

### ಟ್ವಿಟ್ವಾದ...



ಗೋರಖ್‌ಪುರದಲ್ಲಿ ಸೋಲು, ಫೂಲ್‌ಪುರದಲ್ಲೂ ಸೋಲು... ಇನ್ನು ಯೋಗಿ ಆದಿತ್ಯನಾಥ ಅವರು ಕರ್ನಾಟಕ ಮತ್ತು ಕೇರಳದಂತಹ ರಾಜ್ಯಗಳಿಗೆ ಸಲಹೆ ನೀಡುವುದನ್ನು ನಿಲ್ಲಿಸಬೇಕು. ಮೊದಲು ನಿಮ್ಮ ರಾಜ್ಯದಲ್ಲಿ ಆಡಳಿತ ನಡೆಸಿ. ನಂತರ ಬೇರೆ ರಾಜ್ಯಗಳ ಬಗ್ಗೆ ಮಾತನಾಡಿ.

–ಕೆ. ಚಂದ್ರಕುಮಾರ್ @kurup62



ಈ ಚುನಾವಣಾ ಫಲಿತಾಂಶದಿಂದ ನಮ್ಮ ಆತ್ಮಸ್ಥೈರ್ಯ ಯಾಕೆ ಕುಗ್ಗಬೇಕು? ವಿರೋಧ ಪಕ್ಷಗಳು ಸಂಭ್ರಮಿಸಲಿ ಬಿಡಿ. 2019ರ ಚುನಾವಣೆಯಲ್ಲಿ ಈ ಕ್ಷೇತ್ರಗಳನ್ನು ವಶಪಡಿಸಿಕೊಳ್ಳಲು ಅವಕಾಶ ಇದ್ದೇ ಇದೆ. ಇತ್ತೀಚೆಗೆ ನೀವು ಈಶಾನ್ಯ ರಾಜ್ಯಗಳಲ್ಲಿ ಗೆದ್ದಿದ್ದೀರಿ. ಸರದಿಯಲ್ಲಿ ಕರ್ನಾಟಕ ಇದೆ. ವಿಶ್ವಾಸ ಕಳೆದುಕೊಳ್ಳಬೇಡಿ; ಆ ಹೊತ್ತಿಗೆ ಹಲವು ವಿಷಯಗಳು ನಿಮಗೆ ಅನುಕೂಲಕರವಾಗಲಿವೆ.

–ಮೇಜರ್ ಸುಬ್ರತ್ ಮಿಶ್ರಾ ಎಸ್.ಎಂ (ನಿವೃತ್ತ) @SubratSMSM



ವಿರೋಧ ಪಕ್ಷಗಳು ರೂಪಿಸುವ ಯೋಜನೆಯಲ್ಲಿ ಮಾಯಾವತಿ ಅತ್ಯಂತ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ ಎಂಬುದನ್ನು ಉತ್ತರ ಪ್ರದೇಶದ ಉಪಚುನಾವಣೆ ನೆನಪಿಸಿದೆ. ಕರ್ನಾಟಕದಲ್ಲಿ ದೇವೇಗೌಡರಿಗೆ ನೀಡಿರುವ ಬೆಂಬಲದ ಬಗ್ಗೆ ಅವರು ಪರಾಮರ್ಶೆ ನಡೆಸಲಿದ್ದಾರೆಯೇ?– ಯಾಕೆಂದರೆ ಈ ಮೈತ್ರಿಯು ಬಿಜೆಪಿ ವಿರೋಧಿ ಮತಗಳನ್ನು ಒಡೆದು ಬಿಜೆಪಿಗೇ ಅನುಕೂಲ ಕಲ್ಪಿಸಲಿದೆ. 2019ರ ಚುನಾವಣೆಯಲ್ಲಿ ಮಾಯಾವತಿ 'ಕಿಂಗ್/ಕ್ವೀನ್ ಮೇಕರ್' ಆಗಿಯೇ ಉಳಿಯಲಿದ್ದಾರೆ. ಅವರು ದೊಡ್ಡ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಸಾಧ್ಯತೆ ಇದೆ.

-ಬರ್ಖಾ ದತ್ @BDUTT

### ಜಾತಿ– ಪಟೇಲರ ದೃಷ್ಟಿ

**ಜೆ.ಎಚ್.ಪಟೇಲರು** ಆಗಷ್ಟೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ದಲಿತನಾದ ನನ್ನನ್ನು ಪ್ರಭಾವಶಾಲಿ ಖಾತೆಯಾದ ಕಂದಾಯ ಮಂತ್ರಿಯನ್ನಾಗಿ ಮಾಡಿದ್ದರು. ಇದು ಹಲವು ಜಾತಿ ಮತ್ತು ಕೋಮುಗಳ ನಾಯಕರಿಗೆ ಅಸಾಧ್ಯ ಕೋಪ ತರಿಸಿತ್ತು. ನನ್ನನ್ನು ಈ ಇಲಾಖೆಗೆ ತಂದಿದ್ದರಿಂದ ಪಟೇಲರಿಗೆ ರಾಜಕೀಯವಾಗಿ ನಷ್ಟ ಆಗಿದೆಯೇ ವಿನಾ ಲಾಭವಾಗಿಲ್ಲ ಎಂದು ಮಾಧ್ಯಮಗಳು ಬಣ್ಣಿಸಿದ್ದವು. ಹೀಗಾಗಿ ನನ್ನ ಮನಸ್ಸಿನಲ್ಲಿ ವ್ಯಾಕುಲ, ಆತಂಕ ತುಂಬಿತ್ತು.

ಇಲಾಖೆಯ ಪ್ರಮುಖ ಕಡತಗಳೊಂದಿಗೆ, ಮಂತ್ರಿಯಾದ ಮರುದಿನ ಪಟೇಲರ ನಿವಾಸಕ್ಕೆ ಹೋದೆ. ಮುಖ್ಯಮಂತ್ರಿ ನಿವಾಸದ ಮುಂದೆ ಜನಸಂದಣಿ ಇತ್ತು. ಒಳಗಿನಿಂದ ಏರಿದ ಧ್ವನಿಯಲ್ಲಿ ಮಾತುಕತೆ ನಡೆದಿತ್ತು. ಬೇರೆ ಯಾವ ಜಾತಿಯೂ ನಿಮ್ಮ ಕಣ್ಣಿಗೆ ಬೀಳಲಿಲ್ಲವೇನು– ಹೀಗೆಂದು ಒಳಗಿದ್ದ ಮಹನೀಯರೊಬ್ಬರು ದಪ್ಪ ಧ್ವನಿಯಲ್ಲಿ ಸವಾಲು ಹಾಕಿದ್ದು, ಕೂಡಲೇ ಇಬ್ಬರು ಮೂವರು ಇದೇ ಅಭಿಪ್ರಾಯಕ್ಕೆ ನೇಪಥ್ಯದಲ್ಲಿ ಧ್ವನಿ ಕೂಡಿಸಿದ್ದೂ ಸ್ಪಷ್ಟವಾಗಿ ಕೇಳಿಸಿತು.

ಒಳಗಿದ್ದವರು ಯಾರು ಎಂದು ತಿಳಿದುಕೊಳ್ಳುವ ಅವಶ್ಯಕತೆ ನನಗಿರಲಿಲ್ಲ. ನನ್ನಿಂದಾಗಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ ಪಟೇಲರನ್ನು ಅವರ ವಿರೋಧಿಗಳ ಮುಂದೆ ಹೇಗೆ ಭೇಟಿಯಾಗಲಿ ಎಂಬ ಸಂದಿಗ್ಧದಲ್ಲಿ ಬಿದ್ದೆ. ಸಹಜವಾಗಿ ಮುಖ್ಯಮಂತ್ರಿಗಳ ಆಪ್ತ ಸಹಾಯಕ ನನ್ನನ್ನು ನೇರವಾಗಿ ಒಳಗೆ ಕರೆದೊಯ್ದ. ಇದರಿಂದ ಮತ್ತಷ್ಟು ಮುಜುಗರವಾಯಿತು. ಸಮಾಜದ ದೃಷ್ಟಿಯಿಂದ ಈಗಾಗಲೇ ನೊಂದಿದ್ದ ನಾನು, ತಪ್ಪಿತಸ್ಥ ಎಂದು ನನ್ನ ಬಗೆಗೆ ಷರಾ ಬರೆದುಕೊಂಡು ನಿಂತೆ.

**ಆಗ ಪರಿಚಯವಾಯ್ತು ಪಟೇಲರ ವ್ಯಕ್ತಿತ್ವ:** ಬಾರೋ ರಮೇಶಣ್ಣ... (ಪಟೇಲರು ಜೀವ ಇರುವವರೆಗೂ ನನ್ನನ್ನು ಪ್ರೀತಿಯಿಂದ ಕರೆಯುತ್ತಿದ್ದದ್ದು ಹೀಗೆಯೇ) ಸರಿಯಾದ ಸಮಯಕ್ಕೆ ಬಂದೀ... ಬಾ ಇಲ್ಲೇ ಕೂಡು... ಪಕ್ಕದಲ್ಲಿಯೇ ಇದ್ದ ಟೀಪಾಯಿಯ ಮೇಲೆ ಕೂಡಿಸಿದರು. ಎದುರಿಗೆ ಇದ್ದವರನ್ನು ನೋಡಲು ಭಯ ನನಗೆ. ಸಮಾಜದ ಮೇಲ್ವರ್ಗಗಳ ಈ ನಾಯಕರೆಲ್ಲಿ? ನಾನೆಲ್ಲಿ? ಎತ್ತಣ ಮಾಮರ... ದಲಿತ ಯಜ್ಞಪಶು ನಾನು. ನರಬಲಿಗೆ ಸಿದ್ಧವಾಗಬೇಕಾಗಿದ್ದ ಹರಿಜನ.

ನೀನು ಸರಿಯಾದ ಸಮಯಕ್ಕೇ ಬಂದಿದ್ದೀ, ಎಂದರೆ ನಿನ್ನ ಬಗೆಗೇ ಈಗ ಚರ್ಚೆ ಬಂದಿತ್ತು. ನಿನ್ನ ಬಗ್ಗೆ ಅಂದರೆ ಹರಿಜನರ ಬಗ್ಗೆ, ಪಟೇಲರು ನನ್ನ ಭುಜಮುಟ್ಟಿ ಹೇಳಿದರು. ನಾನು ಸಂಕೋಚದಿಂದ ಮತ್ತಷ್ಟು ಮುದುರಿಕೊಂಡೆ.

ಇಷ್ಟು ಮಂದಿ ಬೇರೆ ಬೇರೆ ಜಾತಿಯ ಎಂಎಲ್‌ಎಗಳು ಪಕ್ಷದಲ್ಲಿ ಇರುವಾಗ ಆ ಎಲ್ಲ ಜಾತಿಗಳನ್ನು ಬಿಟ್ಟು ಹರಿಜನನೊಬ್ಬನನ್ನು ನಂಬರ್ ಟೂ ಖಾತೆಗೆ ಆರಿಸಲು ಕಾರಣವೇನು ಎನ್ನುತ್ತಾರೆ ಈ ಜನ. ಶತಶತಮಾನಗಳಿಂದ ತುಳಿಸಿಕೊಂಡ ದಲಿತರನ್ನು ಒಮ್ಮೆಲೇ ಪಕ್ಕಕ್ಕೆ ಕೂಡಿಸಿಕೊಳ್ಳುವ ನನ್ನಂಥ ರಾಜಕಾರಣಿಯನ್ನು ಮುಂದುವರಿದ ಸಮಾಜ ಕ್ಷಮಿಸಲಾರದು. ಕ್ಯಾಕರಿಸಿ ಉಗುಳಿದರೂ ಹೆಚ್ಚಲ್ಲ. ಈ ಪಟೇಲ ಹುಚ್ಚ, ಮೂರ್ಖ ಎಂದರೆ ಆಶ್ಚರ್ಯವಿಲ್ಲ. ಗಾಂಧೀಜಿ ಬಗ್ಗೆ ಉದ್ದುದ್ದ ವ್ಯಾಖ್ಯಾನ ಮಾಡುವುದು ಸುಲಭ. ಬಸವಣ್ಣನವರನ್ನೂ ರಾಗವಾಗಿ ಉಲ್ಲೇಖಿಸುವುದು ಮತ್ತಷ್ಟು ಹಗುರ...

ಪಟೇಲರಿಗೆ ಏನು ತೋಚಿತೋ ಏನೋ ಒಂದು ನಿಮಿಷ ಮಾತು ಹಾಗೂ ವಿಚಾರಧಾರೆಯನ್ನು ನಿಲ್ಲಿಸಿದರು. ದಾರಿಜಗಳ ನಡೆಯುವಾಗ ಎದುರಾಳಿಯ ಕತ್ತಿನಪಟ್ಟಿ ಹಿಡಿಯುವ ರೀತಿಯಲ್ಲಿ ಹೇಳಿದರು. 'ರೀ ಸಾವಿರಾರು ವರ್ಷ ಸಮಾಜದ ಗಂಜಳ ವರೆಸಿದ್ದಾರೆ ಈ ಜನ. ಸತ್ತ ದನಗಳನ್ನು ಎಳೆದೊಯ್ದು ನಿಮ್ಮ ಪಾಯಖಾನೆಯನ್ನೂ ತಲೆ ಮೇಲೆ ಎತ್ತಿ ಒಯ್ದಿದ್ದಾರೆ'.

ನನಗೆ ಮುಂದೇನೂ ಕಾಣಿಸಲೇ ಇಲ್ಲ. ಕಣ್ಣಿನಲ್ಲಿ ನೀರು ಮಡುಗಟ್ಟಿತ್ತು. ಎಷ್ಟೇ ನಿಯಂತ್ರಿಸಬೇಕೆಂದರೂ ಆಗಲಿಲ್ಲ. ಕಣ್ಣೀರ ಹನಿ ನಾನು ತಂದಿದ್ದ ಫೈಲಿನ ಮೇಲೆ ಟಪ್ಪೆಂದು ಬಿತ್ತು.

ಮೇಲೆ ನಿಂತಿದ್ದ ನಾಯಕರುಗಳ ಸ್ಥಿತಿಯೂ ನನ್ನಷ್ಟೇ ದಾರುಣವಾಗಿತ್ತು. ಸಮಾಧಾನ ನಿರೀಕ್ಷಿಸಿ ಬಂದಿದ್ದ ಈ ನಾಯಕ ವರ್ಗ, ಪಟೇಲರ ರಾಜಕೀಯ ಸಿದ್ಧಾಂತದ ಭೋರ್ಗರೆತದ ಮುಂದೆ ತತ್ತರಿಸಿತ್ತು. ಹೀಗೆ ಬಂದಿದ್ದ ನಿಯೋಗದಲ್ಲಿ ಓರ್ವರು ಧರ್ಮ ಗುರುಗಳೂ ಇದ್ದಂತೆ ನನಗೆ ನೆನಪು. ನಾನಂತೂ ಈ ಮಹನೀಯರನ್ನು ಎಂದೆಂದಿಗೂ ದೂಷಿಸುವುದಿಲ್ಲ. ಬದಲಾಗಿ ಇವರನ್ನು ಸ್ಮರಿಸುತ್ತೇನೆ. ಇವರಿಂದಾಗಿ ನನಗೆ ಪಟೇಲರ ಜೀವನ ದರ್ಶನ ದೊರೆತಿತ್ತು.

**–ರಮೇಶ್ ಜಿಗಜಿಣಗಿ** ('ಬಂಗಾರದ ಮನಸ್ಸು– ಧೀಮಂತ ವ್ಯಕ್ತಿತ್ವ' ಲೇಖನದಲ್ಲಿ)

'ಮುತ್ಸದ್ದಿ ಪಟೇಲ್' ಪುಸ್ತಕದಿಂದ (ಸಂಪಾದಕರು– ಪ.ರಾ.ಶ್ರೀನಿವಾಸ್)

### ಕೇಳಿದ್ದು... ನೋಡಿದ್ದು...

### ಓದುಗರ ಮತ



#### ಇರಲಿ ಎಚ್ಚರ...

ನಾನು ಏಳೆಂಟು ಚುನಾವಣೆಗಳಲ್ಲಿ ಮತ ಚಲಾಯಿಸಿದ್ದೇನೆ. ರಾಜ್ಯವು ಹಿಂದೆ ಎದುರಿಸಿರುವ, ಪ್ರಸ್ತುತ ಎದುರಿಸುತ್ತಿರುವ ಮತ್ತು ಮುಂದೆಯೂ ಎದುರಿಸಬಹುದಾದ ಜ್ವಲಂತ ಸಮಸ್ಯೆಗಳಾದ ಕುಡಿಯುವ ನೀರು, ಉತ್ತಮ ಗುಣಮಟ್ಟದ ಶಿಕ್ಷಣ, ನೀರಾವರಿ ಯೋಜನೆಗಳು, ರಸ್ತೆ ಅಭಿವೃದ್ಧಿಯಂತಹ ವಿಷಯಗಳ ಬಗ್ಗೆ ಗೆದ್ದ ಅಭ್ಯರ್ಥಿಗಳು ಮಾತನಾಡುವುದೇ ಇಲ್ಲ. ಎಲ್ಲ ವರ್ಗದ ಜನರೂ ಒಂದೇ ಎಂದು ಭಾವಿಸಿ ಅವರ ಅಭಿವೃದ್ಧಿಗಾಗಿ ಶ್ರಮಿಸುವ ಮಾತುಗಳೇ ಅವರಿಂದ ಬರುತ್ತಿಲ್ಲ. ಇಂತಹವರಿಂದ ಏನು ನಿರೀಕ್ಷಿಸಲು ಸಾಧ್ಯ?

ಇಲ್ಲಿ ಮತದಾರರಾದ ನಾವು ಮೊದಲು ಬದಲಾಗಬೇಕು. ನಿರ್ದಿಷ್ಟ ಗುರಿಗಳನ್ನು ಇಟ್ಟುಕೊಂಡು ಸಮಾಜದ ಸೇವೆಗಾಗಿಯೇ ರಾಜಕಾರಣಕ್ಕೆ ಬಂದಿರುತ್ತೇನೆ ಎಂದು ಪ್ರಮಾಣ ಮಾಡುವವರು ನಮ್ಮ ಆಯ್ಕೆಯಾಗಬೇಕು. ಜಾತಿವಾರು ಆಡಳಿತಕ್ಕೆ ಜೋತು ಬೀಳದೆ, ಉಚಿತ ಮತ್ತು ಮನ್ನಾ ಭಾಗ್ಯಗಳನ್ನು ಹೋಗಲಾಡಿಸುವ ರಾಜಕಾರಣಿಗಳ ಅವಶ್ಯಕತೆ ಈಗ ಹೆಚ್ಚಾಗಿದೆ. ರಾಜ್ಯದ ರಾಜಕಾರಣದಲ್ಲಿ ಹೊಸ ಮುಖಗಳು ಕಂಡುಬರದೇ ಇರುವುದು ಬೇಸರದ ಸಂಗತಿ. ಹಲವು ಬಾರಿ ಗೆದ್ದವರನ್ನೇ ನಾವು ಇನ್ನೂ ಆರಿಸಿ ಕಳುಹಿಸುತ್ತಿರುವುದು ವಿಪರ್ಯಾಸವೇ ಸರಿ.

**–ರಾಮಪ್ಪ ಗುಡಿಗೇರಿ,** ಕೊಪ್ಪಳ

'ಪ್ರಜಾ ಮತ'ದಲ್ಲಿ ಪ್ರಕಟವಾಗುವ ಲೇಖನ, ವಿಶ್ಲೇಷಣೆ, ಸಂದರ್ಶನ, ವಿಶೇಷ ವರದಿಗಳ ಬಗ್ಗೆ ನಿಮ್ಮ ಅನಿಸಿಕೆಗಳನ್ನು election@prajavani.co.in ಅಥವಾ ವಾಟ್ಸ್ ಆ್ಯಪ್ ಸಂಖ್ಯೆ 9513322930ಗೆ ಕಳುಹಿಸಿ.

ತಾಜಾ ಚುನಾವಣಾ ಸುದ್ದಿಗಳಿಗಾಗಿ ನೋಡಿ elections.prajavani.net